ದಿನಾಂಕಃ 04-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ</u>- ಆರೋಪಿ ಪರವಾಗಿ ಶ್ರೀ.ಡಿ.ವಿ.ಎಸ್. ವಕೀಲರಿಂದಃ-**

ದೂರುದಾರರು ನನ್ನ ಸಹೋದರ. ನಾನು ಆರೋಪಿ ವಿರುದ್ಧ ಹಲವಾರು ಕ್ರಿಮಿನಲ್ ಹಾಗೂ ಸಿವಿಲ್ ಪ್ರಕರಣಗಳನ್ನು ದಾಖಲಿಸಿ ಇಂದಿಗೂ ಸಹ ನಡೆಯುತ್ತವೆ ಎಂದರೆ ಸರಿಯಲ್ಲ. ಸಾಕ್ಷಿಯು ಒಂದು ಸಿವಿಲ್ ಪ್ರಕರಣ ನಡೆಯುತ್ತಿದೆ ಎಂದು ಸ್ವತಃ ನುಡಿಯುತ್ತಾರೆ. ಸರ್ವೆ ನಂಬರ್ 123/3 ರ ಜಮೀನು ಅಶ್ವಥನಾರಾಯಣರವರಿಗೆ ಸೇರಿರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಆ ಜಮೀನಿಗೆ ಸಂಬಂಧಪಟ್ಟಂತೆ ನಾನು ಆರೋಪಿ ವಿರುದ್ಧ ಅಸಲು ದಾವಾ ಸಂಖ್ಯೆ 74/2020 ರಂತೆ ದಾವೆ ಸಲ್ಲಿಸಿರುತ್ತೇನೆ. ಸರ್ವೆ ನಂಬರ್ 123 ಮತ್ತು 124 ರ ಜಮೀನು ಅಶ್ವಥನಾರಾಯಣರವರಿಂದ ನಮ್ಮ ಕುಟುಂಬಕ್ಕೆ ಬಂದಿದ್ದು ಆ ನಂತರ ನಾನು ಮತ್ತು ಆರೋಪಿ ಭಾಗ ಮಾಡಿಕೊಂಡು ನಂತರ ಆರೋಪಿ ಆ ಜಮೀನನ್ನು ನನ್ನಿಂದ ಹಣ ಪಡೆದು ನನ್ನ ಹೆಸರಿಗೆ ಬಿಟ್ಟುಕೊಟ್ಟಿರುತ್ತಾರೆ. ನಮ್ಮ ಕುಟುಂಬದಲ್ಲಿ ಆದ ವಿಭಾಗ ಪತ್ರದಂತೆ ಈ ಆಸ್ತಿಗಳನ್ನು ಆರೋಪಿ ನನಗೆ ಬಿಟ್ಟುಕೊಟ್ಟಿರುತ್ತಾರೆ. ಆ ವಿಭಾಗ ಪತ್ರದಂತೆ ನನ್ನ ಹೆಸರಿಗೆ ಖಾತೆ ಆಗಿರುವುದಿಲ್ಲ. ಶಾಂತಲಕ್ಷ್ಮಿ ಮತ್ತು ಲೀಲಾವತಿರವರು ಅಶ್ವಥನಾರಾಯಣರವರ ಮಕ್ಕಳು ಆಗಿರುತ್ತಾರೆ. ಆ ಪ್ರಕರಣದಲ್ಲಿ ಶಾಂತಲಕ್ಷ್ಮಿ ಮತ್ತು ಲೀಲಾವತಿರವರ ವಿರುದ್ಧ

ಪ್ರಕರಣ ದಾಖಲಾಗಿರುವುದಿಲ್ಲ. ಆದರ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು ಆ ಮೇಲ್ಮನವಿ ವಜಾ ಆಗಿರುತ್ತದೆ. ಈ ಎರಡು ಆಸ್ತಿಗಳು ಅಶ್ವಥನಾರಾಯಣರವರಿಂದ ಅವರ ಮಕ್ಕಳುಗಳಾದ ಶಾಂತಲಕ್ಷ್ಮಿ ಮತ್ತು ಲೀಲಾವತಿರವರ ಹೆಸರಿಗೆ ಐ.ಎಚ್.ಆರ್. ಮೂಲಕ ಬಂದಿರುತ್ತದೆ. ನಾನು ಮತ್ತು ಆರೋಪಿ ಮಾಡಿಕೊಂಡ ವಿಭಾಗ ಪತ್ರದಲ್ಲಿ ಶಾಂತಲಕ್ಷ್ಮೀ ಮತ್ತು ಲೀಲಾವತಿಯವರನ್ನು ಪಕ್ಷಗಾರರನ್ನಾಗಿ ಮಾಡಿಕೊಂಡಿರುವುದಿಲ್ಲ. ಅಶ್ವಥನಾರಾಯಣರವರಿಂದ ಲೀಲಾವತಿ ಮತ್ತು ಶಾಂತಲಕ್ಷ್ಮಿರವರಿಗೆ ಆ ಜಮೀನುಗಳು ಬಂದಿದ್ದು ಅವರುಗಳೇ ಮಾಲೀಕರು ಎಂದರೆ ಸರಿಯಲ್ಲ.

1979 ರಂದು ಅಶ್ವಥನಾರಾಯಣರವರು ತನ್ನ ಹೆಣ್ಣು ಮಕ್ಕಳ ಮದುವೆಗೆ ಹಣ ಬೇಕೆಂದು ಹೇಳಿ ನಾನು ಹಣ ನೀಡಿದ ಬಗ್ಗೆ ಪತ್ರ ಬರೆದುಕೊಟ್ಟಿರುತ್ತಾರೆ ನಾನು ಅಶ್ವಥನಾರಾಯಣರವರಿಗೆ ಹಣ ಕೊಟ್ಟಿರುವುದನ್ನು ಯಾರು ಸಹ ನೋಡಿರುವುದಿಲ್ಲ. ಆ ಸಮಯದಲ್ಲಿ ನಾನು ಮತ್ತು ಅಶ್ವಥನಾರಾಯಣರವರು ಮಾತ್ರ ಇದ್ದೆವು. ಆ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ಆ ಜಮೀನುಗಳ ಸ್ವಾಧೀನವನ್ನು ಅಶ್ವಥನಾರಾಯಣರವರು 1978 ರಂದು ನನಗೆ ಕೊಟ್ಟರು. ಆ ಜಮೀನಿನ ಸ್ವಾಧೀನವನ್ನು ನನಗೆ ಬಿಟ್ಟು ಕೊಡುವ ಸಮಯದಲ್ಲಿ ವೆಂಕಟೇಶ ಮತ್ತು ಅವರ ತಂದೆ ರಂಗಪ್ಪರವರು ನೋಡಿರುತ್ತಾರೆ. ವೆಂಕಟೇಶ್

ಮತ್ತು ರಂಗಪ್ಪರವರು ಆ ಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಿರುವುದಿಲ್ಲ . ಆ ಜಮೀನುಗಳ ಕಂದಾಯ ದಾಖಲೆಗಳು ನನ್ನ ಹೆಸರಿಗೆ ಬರುವ ವೇಳೆಗೆ ಅಶ್ವಥನಾರಾಯಣರವರು ಮೃತ ಪಟ್ಟಿದ್ದರು. ಅಶ್ವಥನಾರಾಯಣರವರು ಈ ಎರಡು ಆಸ್ತಿಗಳ ದಾಖಲೆಗಳನ್ನು ನನ್ನ ತಾಯಿಯ ಹೆಸರಿಗೆ ಬದಲಾವಣೆ ಮಾಡಿಕೊಡುವ ಬಗ್ಗೆ ನೀಡಿದ ಹೇಳಿಕೆಯ ಪ್ರತಿ ನನ್ನ ಬಳಿ ಇದೆ. ಈ ಬಗ್ಗೆ ಎಂ.ಆರ್ 38/1978-79 ಬಂದಿರುತ್ತದೆ. ಆ ಎಂ.ಆರ್. ನಂಬರ್ 38/1978-79 ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ಆ ಎಂ.ಆರ್.38/1978-79 ರ ಮೇಲೆ ಪಹಣಿ ಪತ್ರಿಕೆ ಮಂಜೂರಾಗಿದ್ದು ಆ ಪಹಣಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಈ ಬಗ್ಗೆ ವಿಭಾಗ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ ಅಶ್ವಥನಾರಾಯಣರವರ ಮಕ್ಕಳಿಗೆ ಬಂದ ಆಸ್ತಿಗಳನ್ನು ದಿಃ15-05-2020 ರಂದು ಆರೋಪಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ.

ಕಾಲಭೈರವೇಶ್ವರ ಟ್ರಸ್ಟ್ ಗೆ ನಾನು ಸಹ ಅಧ್ಯಕ್ಷನಾಗಿರುತ್ತೇನೆ. ಅದಕ್ಕೆ ಗೌರವ ಅಧ್ಯಕ್ಷರಾಗಿ ಪ್ರಸನ್ನ ಕುಮಾರ್ ಇದ್ದಾರೆ. ಆ ಟ್ರಸ್ಟ್ ಗೂ ಈ ಜಮೀನುಗಳಿಗೂ ಯಾವುದೇ ಸಂಬಂಧ ಇಲ್ಲ ಆ ಕಾಲಭೈರವೇಶ್ವರ ಟ್ರಸ್ಟ್ ಗೆ ಸಂಬಂಧಪಟ್ಟಂತೆ ನಾನಾಗಲಿ ಬೇರೆ ಯಾರಾಗಲಿ ಪ್ರಕರಣ ದಾಖಲಿಸಿರುವುದಿಲ್ಲ. ಆ ಆಸ್ತಿಗಳಿಗೂ

ಕಾಲಭೈರವೇಶ್ವರ ಟ್ರಸ್ಟ್ ಗೂ ಯಾವುದೇ ಸಂಬಂಧ ಇಲ್ಲ ಎಂದು ಹೇಳಿ ಆ ಟ್ರಸ್ಟ್ ರವರು ಪತ್ರ ವ್ಯವಹಾರ ಮಾಡಿದ್ದಾರೆ ಎಂದರೆ ಸರಿ . ನಿಪಿ.6 ನ್ನು ಆರೋಪಿ ಬರೆದುಕೊಟ್ಟಿರುವುದಿಲ್ಲ. ಈ ಪ್ರಕರಣವನ್ನು ಆರೋಪಿ ವಿರುದ್ಧ ಸಲ್ಲಿಸಲು ನಾನೇ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಪಿ.3 ನ್ನು ಯಾವ ದಿನಾಂಕದಂದು ನೀಡಿದ್ದೇನೆ ಎಂದರೆ ದಿನಾಂಕ ನಮೂದಿಸಿಲ್ಲ ಆದರೆ ಆ ನಿಪಿ.3 ನ್ನು ಆರೋಪಿ ಆ ಟ್ರಸ್ಟ್ ಗೆ ನೀಡಿದ್ದು ಆ ಟ್ರಸ್ಟ್ ನ ಕೆ.ಎಸ್.ಪ್ರಸನ್ನ ಕುಮಾರ್ ಗೌರವ ಅಧ್ಯಕ್ಷರು ಆ ಪತ್ರವನ್ನು ನೀಡಿರುತ್ತಾರೆ . ನಿಪಿ.3 ಮತ್ತು 4 ನ್ನು ನನಗೆ ಕೊಟ್ಟ ಬಗ್ಗೆ ಆ ಟ್ರಸ್ಟ್ ವತಿಯಿಂದ ಪತ್ರದ ಮೂಲಕ ಆ ಎರಡು ದಾಖಲೆಗಳನ್ನು ನೀಡಿರುತ್ತಾರೆ . ಆ ಎರಡು ಪತ್ರಗಳನ್ನು ಆರೋಪಿ ಆ ಟ್ರಸ್ಟ್ ಗೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಆ ಎರಡು ಪತ್ರಗಳನ್ನು ಆರೋಪಿ ಬರೆದುಕೊಟ್ಟು ನನಗೆ ಮಾನಹಾನಿ ಉಂಟು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆ ಎರಡು ಪತ್ರಗಳ ಮೇಲೆ ಕ್ರಮ ತೆಗೆದುಕೊಳ್ಳುವಂತೆ ನಾನು ಪೊಲೀಸರಿಗೆ ದೂರು ನೀಡಿರುವುದಿಲ್ಲ. ಆ ಎರಡು ಪತ್ರಗಳನ್ನು ಆ ಟ್ರಸ್ಟ್ ನ ಗೌರವ ಅಧ್ಯಕ್ಷರಾದ ಪ್ರಸನ್ನ ಕುಮಾರ್ ರವರು ನೀಡಿದ್ದಾರೆ ಎಂದು ನನ್ನ ದೂರಿನಲ್ಲಿ ಹೇಳಿದ್ದೇನೆ. ಆ ಗೌರವ ಅಧ್ಯಕ್ಷ ಪ್ರಸನ್ನ ಕುಮಾರ್ ರವರನ್ನು ಸಾಕ್ಷಿದಾರರಾಗಿ ದೂರಿನಲ್ಲಿ ನಮೂದಿಸಿರುವುದಿಲ್ಲ.

ನಾನು ಹಾಜರುಪಡಿಸಿರುವ ಪಹಣಿ ಪತ್ರಿಕೆಗಳು ಆರೋಪಿಗೆ ಸಂಬಂಧಪಟ್ಟ

ಆಸ್ತಿಗಳಿಗೆ ಸಂಬಂಧಿಸಿದ ದಾಖಲೆಗಳು ಆಗಿರುತ್ತವೆ. ಆರೋಪಿ ಎಂದೂ ಸಹ ನನಗೆ ಮಾನಹಾನಿ ಮಾಡಬೇಕೆಂಬ ಉದ್ದೇಶದಿಂದ ನನಗೆ ಯಾವುದೇ ದಾಖಲೆಗಳನ್ನು ಕಾಲಭೈರವೇಶ್ವರ ಟ್ರಸ್ಟ್ ಗೆ ನೀಡಿರುವುದಿಲ್ಲ. ನಾನು ಆರೋಪಿಗೆ ಒಂದಲ್ಲ ಒಂದು ರೀತಿ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಆ ದಾಖಲೆಗಳನ್ನು ಸೃಷ್ಟಿಸಿ ಈ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)
ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ